ರಾತ್ರಿಯ ಪರಾಕ್ರಮದ ಆಯಾಸದಿಂದಲೋ ಏನೋ ಕರಮಚಂದ ಇನ್ನೂ ಎದ್ದಿರಲಿಲ್ಲ. ಏಳರ ಹೊತ್ತಿಗೆ ಕಿಚನ್‌ನಲ್ಲಿ ನಾನು ಕಾಫಿ ತಯಾರಿಯಲ್ಲಿದ್ದೆ. ಆಗ ಚರವಾಣಿಯ ರಿಂಗಣ ಆತನ ನಿದ್ರಾಭಂಗ ಮಾಡಿತು. ಕರೆ ಸ್ವೀಕರಿಸಿದ ಕರಮಚಂದನ ಮಾತುಗಳು ಅಸ್ಪಷ್ಟವಾಗಿ, ಮತ್ತು ಗಟ್ಟಿಯಾಗಿ ನಕ್ಕಿದ್ದು ಕೇಳಿಸಿತು. ಕೆಲ ಕ್ಷಣಗಳಲ್ಲಿ ಹೊರಬಂದ ಕರಮಚಂದ ಸ್ವರ ಹಾಕಿದ,

"ಬಿದ್ದಪ್ಪ, ನಾವೀಗಲೇ ಬೋಪಣ್ಣನ ಮನೆಗೆ ಹೋಗೋಣ. ಅಲ್ಲೊಂದು ತಮಾಷೆ ನಡೀತಿದೆ!"

ಹತ್ತು ನಿಮಿಷಗಳಲ್ಲಿ ನಾವು ಕಾರನ್ನೇರಿ, ಹೊರಟೆವು.

"ಪೊಲೀಸ್ ಪೇದೆ ಕಾಳಪ್ಪನನ್ನು ಕರೆದುಕೊಂಡು ಮಾಲೀಕ ಪಾಪುಟ್ಟಿ ಬಂದಿದ್ದಾನಂತೆ. ಬೋಪಣ್ಣನ ಮೇಲೆ ಕಳ್ಳತನದ ಆರೋಪ ಹೊರಿಸ್ತಾ ಇದ್ದಾನಂತೆ."

ಹಾದಿಯಲ್ಲಿ ಕರಮಚಂದ ನೀಡಿದ ವಿವರಣೆ ಒಗಟಿನಂತಿತ್ತು. ಕುತೂಹಲ ತಡೆಯಲಾಗದೆ, ನಾನು ಕಾರಿನ ವೇಗ ಹೆಚ್ಚಿಸಿದೆ.

ಬೋಪಣ್ಣನ ಮನೆಯೆದುರು ನಾಲ್ವರು ನಿಂತಿದ್ದರು. ಕಾಳಪ್ಪ ನಮ್ಮನ್ನು ಕಂಡು ಪರಿಚಯದ ನಗೆ ಬೀರಿದ. ಪಕ್ಕದಲ್ಲಿ ನಿಂತಿದ್ದ ಬಿಗಿಮೊಗದ ಆಸಾಮಿ ಪಾಪುಟ್ಟಿಯೆಂದು ಊಹಿಸಿದೆ.

"ಸಾರ್, ಷೆಡ್‌ನ ಬೀಗವನ್ನು ನಾನು ಬದ್ಲಾಯಿಸಿದ್ದೇನೆ ಅಂತ ಕೂಗಾಡ್ತಿದ್ದಾನೆ. ತಕ್ಷಣ ಮನೆ ಖಾಲಿ ಮಾಡಬೇಕಂತೆ. ನಾನ್ಯಾಕೆ ಬೀಗ ಬದ್ಲಾಯಿಸಲಿ. ನನ್ ಮಗನೂ ತಾನೇನೂ ಮಾಡಿಲ್ಲ ಅಂತಿದ್ದಾನೆ. ಏನೂ ಅರ್ಥವಾಗ್ತಿಲ್ಲ."

"ನೋಡಿ ಸಾರ್, ಹಳೆಯ ಬೀಗ. ಮುರಿದು ಹಾಕಿದ್ದಲ್ಲದ್ದೇ ತಂದು, ನನ್ನ ಮನೆಯೆದುರು ಇರಿಸಿ ಹೋಗಿದ್ದಾರೆ. ಎಷ್ಟು ಸೊಕ್ಕು ಇವ್ರಿಗೆ." ಪಾಪುಟ್ಟಿ ನಮಗೆ ಮುರಿದ ಬೀಗವನ್ನು ತೋರಿಸಿದ.

"ಎಲ್ಲಿ, ಆ ಷೆಡ್ ನೋಡೋಣ."

ನಾವೆಲ್ಲ ಆ ಹಳೆಯ ಷೆಡ್ಡಿನ ಸನಿಹ ಹೋದೆವು. ಅದರ ಬಾಗಿಲಿನಲ್ಲಿ ಗೋದ್ರೆಜ್ ಕಂಪನಿಯ ಹೊಸ ಬೀಗವೊಂದು ನೇತಾಡುತ್ತಿತ್ತು. ಕರಮಚಂದ ಜೇಬಿನಿಂದ ಕೀಯೊಂದನ್ನು ಹೊರಗೆಳೆದು, ಅದರ ರಂಧ್ರದಲ್ಲಿ ತಿರುಗಿಸಿದ. ಬೀಗ ಕಳಕ್ ಸದ್ದಿನೊಂದಿಗೆ ತೆರೆದುಕೊಂಡಿತು.

"ಅದೇನು? ಮಾಸ್ಟರ್ ಕೀಯೇ?" ಬೋಪಣ್ಣ ವಿಚಾರಿಸಿದ.

ಕರಮಚಂದ ನನ್ನನ್ನು ನೋಡಿ ನಕ್ಕ. ನನಗೆ ತಕ್ಷಣ ಆ ಬೀಗ ಹಾಕಿದವನು ಕರಮಚಂದನೇ ಎಂದು ಅರಿವಾಯಿತು.

"ಪಾಪುಟ್ಟಿ, ನೀನೇ ಎಲ್ಲವನ್ನೂ ತೋರಿಸುತ್ತೀಯಾ? ಅಥವಾ ನಾನೇ ತೋರಿಸಲೋ?" ಕರಮಚಂದನ ಮಾತು ಕೇಳಿ ಪಾಪುಟ್ಟಿಯ ಮೊಗ ಬಿಳಿಚಿಕೊಂಡಿತು. ಮರು ಮಾತಾಡದೆ ಆತ ಷೆಡ್‌ನ ಒಳಗಡಿಯಿರಿಸಿ, ಅಲ್ಲಿದ್ದ ಚೀಲಗಳನ್ನು ಬದಿಗೆ ತಳ್ಳಿದ. ನಂತರ ನೆಲದಲ್ಲಿದ್ದ ಕಬ್ಬಿಣದ ಕೊಂಡಿಯೊಂದನ್ನು ಹಿಡಿದು, ಕಲ್ಲಿನ ಹಾಸೊಂದನ್ನು ಮೇಲಕ್ಕೆತ್ತಿದ. ಅಲ್ಲೊಂದು ನೆಲಮಾಳಿಗೆ! ಕೆಳಗಿಳಿಯಲು ಕಡಿದಾದ ಮೆಟ್ಟಿಲುಗಳಿದ್ದವು. ನಾವು ಜಾಗರೂಕತೆಯಿಂದ ಪಾಪುಟ್ಟಿಯನ್ನು ಹಿಂಬಾಲಿಸಿದೆವು. ಒಳಗೆ ಕತ್ತಲು ತುಂಬಿತ್ತು. ಮೊಬೈಲಿನ ಟಾರ್ಚ್ ಬೆಳಕಿನಲ್ಲಿ, ಇಕ್ಕಟ್ಟಾದ ಓಣಿಯಲ್ಲಿ ನಾವು ಮುಂದುವರೆದೆವು.

"ಬೋಪಣ್ಣ, ನೀವು ಇದನ್ನು ಗುರುತಿಸಬಲ್ಲಿರಾ?" ಕರಮಚಂದ ಬಗ್ಗಿ, ನೆಲದ ಮೇಲಿದ್ದ ವಸ್ತುವೊಂದನ್ನು ಎತ್ತಿ ಬೆಳಕಿಗೆ ಹಿಡಿದ.

ನೀಲಿ ಕಲೆ ಅಂಟಿದ ಪೌಚ್!

"ಹಾಂ, ಇದರಲ್ಲೇ ನಾನು ಹಣ ಇರಿಸಿದ್ದು!" ಬೋಪಣ್ಣ ಉದ್ಗಾರ ತೆಗೆದ.

"ಅದು ಇಲ್ಲಿ ಹೇಗೆ ಬಂತು?" ಒಡನೆಯೇ ಬಂತು ಪ್ರಶ್ನೆ.